**ಮಾನ್ಯ 13 ನೇ ಅಧಿಕ ಲಘುವ್ಯವಹಾರಗಳ ನ್ಯಾಯಾಲಯ ಹಾಗೂ ಎಸಿಜೆಎಂ ಮತ್ತು ಎಂಎಸಿಟಿ, ಬೆಂಗಳೂರು**

| | | |
|---|---|---|
| ಹೆಸರು | :- | **Rangamma** |
| ಗಂಡನ ಹೆಸರು | :- | **Prakash** |
| ವಯಸ್ಸು | :- | **35Years** |
| ಉದ್ಯೋಗ | :- | **Kooli** |
| ವಿಳಾಸ | :- | **Thipaturu** |

**ದಿಃ 20.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದು.

ಕಿಬ್ಬನಹಳ್ಳಿ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ.26/2023 ರ ಪ್ರಥಮ ವರ್ತಮಾನ ವರದಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.1 ಎಂದು, ಫಿರ್ಯಾದಿನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.2 ಎಂದು, ಎರಡು ಹಿಂಬರಹಗಳನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.3 ಮತ್ತು 4 ಎಂದು, ಸ್ಥಳ ಪಂಚನಾಮೆಯ ಜೊತೆಗೆ ಸ್ಥಳ ನಕ್ಷೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.5 ಎಂದು, ಅಮಾನತು ಪಂಚನಾಮೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.6 ಎಂದು, ಒಂದು IMV ವರದಿಯ ದೃಢೀಕೃತ ಪ್ರತಿಯನ್ನು

This is a True Copy of the Court Records Online. Authenticated @ districts.ecourtsindia.com/cnr/KABC020029302024/truecopy/order-1.pdf

www.ecourtsindia.com

ಹಾಜರುಪಡಿಸಿದ್ದು ಅದನ್ನು ನಿ.ಪಿ.7 ಎಂದು, ಶವ ತನಿಖಾ ವರದಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.8 ಎಂದು, ಪಿ ಎಂ ವರದಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.9 ಎಂದು, ಅಂತಿಮ ವರದಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.10 ಎಂದು, 2 ಹಾಗೂ 3 ನೇ ಅರ್ಜಿದಾರರ ವ್ಯಾಸಂಗ ದೃಢೀಕರಣ ಪತ್ರಗಳನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.11 ಮತ್ತು 12 ಎಂದು ಗುರುತಿಸಲಾಯಿತು.

ನನ್ನ, ನನ್ನ ಗಂಡನ ಹಾಗೂ 2 ಹಾಗೂ 3 ನೇ ಅರ್ಜಿದಾರರ ಆಧಾರ್ ಕಾರ್ಡ್ ಗಳ ಹಾಗೂ ನಮ್ಮ ಕುಟುಂಬದ ಪಡಿತರ ಚೀಟಿಯ ನೋಟರೈಸ್ಡ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. (ಸದರಿ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಿದ್ದು ಅದನ್ನು ನೋಟರೈಸ್ಡ್ ಪ್ರತಿಗಳೊಂದಿಗೆ ತಾಳೆ ನೋಡಿ ಸರಿ ಇದೆ ಎಂದು ಒಪ್ಪಿಕೊಂಡು ಮೂಲ ಪ್ರತಿಗಳನ್ನು ಸಾಕ್ಷಿದಾರರಿಗೆ ವಾಪಸ್ಸು ಮಾಡಲಾಯಿತು.) ಸದರಿ ದಾಖಲೆಗಳನ್ನು ನಿ.ಪಿ.13 ರಿಂದ 17 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಅರ್ಜಿದಾರರ ಪರ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ ಹೇ ಕೇ ಸ ಇ ಒ**

**13 ನೇ ಎಎಸ್‌ಸಿಜೆ ಮತ್ತು ಎಸಿಜೆಎಂ**
**ಬೆಂಗಳೂರು**

This is a True Copy of the Court Records Online. Authenticated @ districts.ecourtsindia.com/cnr/KABC020029302024/truecopy/order-1.pdf

www.ecourtsindia.com